ದಿನಾಂಕ: 20-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಂದುವರೆದ ಪಾಟೀಸವಾಲುಃ ಶ್ರೀ.ಎನ್.ಎಸ್.ಜಿ. ವಾದಿ ಪರ ವಕೀಲರಿಂದಃ</u>**

20. ನಮ್ಮ ಮತ್ತು ವಾದಿಯ ನಡುವೆ ಆದ ಮಾತುಕತೆಯ ಪ್ರಕಾರ ಕರಾರು ಪತ್ರ ಬರೆದುಕೊಟ್ಟ 02 ವರ್ಷದ ಒಳಗೆ ಖರೀದಿ ಪತ್ರ ಬರೆದುಕೊಡಬೇಕು ಎಂದು ಮಾತು ಆಗಿತ್ತು ಎಂದರೆ ಸರಿಯಲ್ಲ. ಅದೇ ರೀತಿ ಖರೀದಿ ಪತ್ರ ಬರೆದುಕೊಟ್ಟ ದಿನ ದಾವಾ ಆಸ್ತಿಯ ಕಬ್ಜೆ ಕೊಡುವುದಾಗಿ ಮಾತುಕತೆ ಆಗಿತ್ತು ಎಂದರೆ ಸರಿಯಲ್ಲ. ಈ ಮಾತುಕತೆಯ ಪ್ರಕಾರ ನಾನು, ಪ್ರತಿವಾದಿ 1, 2, ಮೃತ ಲಕ್ಷ್ಮಣ ಹಾಗೂ ಪ್ರತಿವಾದಿ 8 ಇವರುಗಳು ಸೇರಿ ದಿಃ04/06/2020 ರಂದು ವಾದಿಗೆ ನೋಂದಾಯಿತ ಖರೀದಿ ಕರಾರ ಪತ್ರ ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ವಾದಿಯಿಂದ ನಾವು ಖರೀದಿ ಮೊತ್ತ ರೂ.16,00,000/- ದ ಪೈಕಿ ರೂ.15,00,000/- ಮುಂಗಡವಾಗಿ ಪಡೆದು ದಿಃ04/06/2020 ರಂದು ಖರೀದಿ ಕರಾರ ಪತ್ರ ಬರೆದುಕೊಟ್ಟಿದ್ದರೂ ಸಹ ರೂ.8,50,000/- ಕ್ಕೆ ಭದ್ರತೆಗಾಗಿ ದಾಖಲೆ ಬರೆದುಕೊಟ್ಟಿದ್ದೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಖರೀದಿ ಕರಾರ ಪತ್ರ ದಿಃ08/06/2020 ರಂದು ನೋಂದ ಆಗಿದೆ ಎಂದರೆ ಸರಿಯಲ್ಲ.

21. ನೋಂದಣಿ ಮಾಡುವುದಕ್ಕಿಂತ ಪೂರ್ವದಲ್ಲಿ ನೋಂದಣಿ ಅಧಿಕಾರಿಗಳು ಖರೀದಿ ಕರಾರು ಪತ್ರದಲ್ಲಿ ಹೇಳಿರುವ ವಿಷಯಗಳನ್ನು ನಮಗೆ

ತಿಳಿಸಿ ನಮಗೆ ದುಡ್ಡು ಮುಟ್ಟಿವೆಯೋ ಇಲ್ಲವೋ ಖಾತ್ರಿ ಪಡಿಸಿಕೊಂಡು ಖರೀದಿ ಕರಾರ ಪತ್ರ ನೋಂದಣಿ ಮಾಡಿರುತ್ತಾರೆ ಸರಿಯಲ್ಲ.

22. ದಾಖಲೆ ನೋಂದ ಮಾಡುವ ಸಮಯದಲ್ಲಿ ನೋಂದಣಿ ಅಧಿಕಾರಿಗಳಿಗೆ ನಮಗೆ ರೂ.15,00,000/- ಮುಟ್ಟಿಲ್ಲ ಕೇವಲ ರೂ.8,50,000/- ಮುಟ್ಟಿವೆ ಎಂದು ತಕರಾರು ಮಾಡಿಲ್ಲ. ಮಾತುಕತೆಯ ಪ್ರಕಾರ ಖರೀದಿ ಮೊತ್ತದ ಪೈಕಿ ರೂ.15,00,000/- ಪಡೆದುಕೊಂಡು ಖರೀದಿ ಕರಾರ ಪತ್ರ ಬರೆದುಕೊಟ್ಟು ನೋಂದಣಿ ಮಾಡಿಕೊಟ್ಟಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

23. ನಾವು ಖರೀದಿ ಕರಾರ ಪತ್ರ ಬರೆದುಕೊಟ್ಟ ನಂತರ ವಾದಿ ನಮ್ಮನ್ನು ಹಾಗೂ ನನ್ನ ತಮ್ಮ ಲಕ್ಷ್ಮಣ ಇವರ ಜೀವಿತ ಕಾಲದಲ್ಲಿ ಲಕ್ಷ್ಮಣ ಇವರನ್ನು ಮೇಲಿಂದ ಮೇಲೆ ಖರೀದಿ ಕರಾರ ಪತ್ರದ ಪ್ರಕಾರ ಖರೀದಿ ಪತ್ರ ಬರೆದುಕೊಡಿ ಎಂದು ಕೇಳಿದ್ದರು ಎಂದರೆ ಸರಿಯಲ್ಲ. ನನ್ನ ತಮ್ಮ ಲಕ್ಷ್ಮಣ ಇವರ ಮರಣಾ ನಂತರವೂ ಸಹ ವಾದಿ, ಪ್ರತಿವಾದಿ 1, 2, ನನಗೆ ಮತ್ತು ನನ್ನ ತಮ್ಮನ ವಾರಸುದಾರರಿಗೆ ಹಾಗೂ ಪ್ರತಿವಾದಿ 8 ರವರಿಗೆ ಖರೀದಿ ಕರಾರ ಪತ್ರದ ಪ್ರಕಾರ ಖರೀದಿ ಪತ್ರ ಬರೆದುಕೊಡಿ ಎಂದು ಕೇಳಿರುತ್ತಾರೆ ಎಂದರೆ ಸರಿಯಲ್ಲ. ಖರೀದಿ ಕರಾರು ಪತ್ರದಲ್ಲಿ ನಾವು ರೂ.8,50,000/- ವಾದಿಯಿಂದ ಸಾಲ ಪಡೆದಿದ್ದಕ್ಕಾಗಿ ಭದ್ರತೆಗಾಗಿ ಆ ದಾಖಲೆ ಬರೆದುಕೊಟ್ಟಿದ್ದೆವು ಎಂದು ನಿಪಿ-1ರಲ್ಲಿ ಎಲ್ಲಿಯೂ ಬರೆದಿಲ್ಲ ಎಂದರೆ ಸರಿ.

24. ವಾದಿ ಊರಲ್ಲಿ ಬಡ್ಡಿಯ ಮೇಲೆ ದುಡ್ಡು ಕೊಡುತ್ತಾರೆ ಎಂದು ತೋರಿಸಲು ನಮ್ಮ ಬಳಿ ಯಾವುದೇ ದಾಖಲೆ ಇರುವುದಿಲ್ಲ. ನಿಪಿ-4 ರಲ್ಲಿ ಪೈಪಲೈನ್ ಹಾಕಲು ಹಣದ ಅವಶ್ಯಕತೆ ಇದೆ ಎಂದು ಬರೆಯಿಸಿದ್ದಕ್ಕೆ ಸಾಕ್ಷಿದಾರರನ್ನು ಪೈಪಲೈನ್ ಹಾಕಲು ತಹಸೀಲ್ದಾರರಿಂದ ಅನುಮತಿ ಪಡೆದಿದ್ದೀರಾ ಎಂದರೆ ಸಾಕ್ಷಿದಾರರು 30-35 ವರ್ಷಗಳ ಹಿಂದೆಯೆ ಅನುಮತಿ ಪಡೆದಿದ್ದಾಗಿ ಹೇಳುತ್ತಾರೆ. 30-35 ವರ್ಷಗಳ ಹಿಂದೆ ಪೈಪಲೈನ್ ಹಾಕಲು ಅನುಮತಿ ಪಡೆದ ಬಗ್ಗೆ ದಾಖಲೆ ಹಾಜರ ಮಾಡುತ್ತೇನೆ. ಪೈಪಲೈನ್ ಹಾಕು ಪೈಪ್ ಖರೀದಿ ಮಾಡಿದ ಬಗ್ಗೆ ರಸೀದಿ ಇರುವುದಿಲ್ಲ.

25. ವಾದಿ ಖರೀದಿ ಕರಾರ ಪತ್ರವನ್ನು ಸಾಕ್ಷಿದಾರರ ಜೊತೆ, ಪತ್ರ ಬರಹಗಾರರ ಜೊತೆ, ನೋಂದಣಿ ಅಧಿಕಾರಿಗಳ ಜೊತೆ ಶಾಮೀಲಾಗಿ ಬರೆದುಕೊಂಡಿದ್ದಾರೆ ಎಂದು ಹೇಳಿ ವಾದಿಯ ವಿರುದ್ಧ ಪೊಲೀಸ ಠಾಣೆಯಲ್ಲಿ ನಾವು ಯಾವುದೇ ದೂರು ಕೊಟ್ಟಿಲ್ಲ. ವಾದಿ ಯಾವತ್ತೂ ಯಾರಿಗೂ ಬಡ್ಡಿಯ ಮೇಲೆ ಹಣ ಕೊಡುವುದಿಲ್ಲ ಆದರೂ ಸಹ ನನಗೆ ಅನುಕೂಲ ಆಗಲಿ ಎಂದು ವಾದಿ ನಮಗೆ ಬಡ್ಡಿಯ ಮೇಲೆ ಹಣ ಕೊಟ್ಟಿದ್ದಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

26. ವಾದಿಯಿಂದ ನಾವು ರೂ.8,50,000/- ಬಡ್ಡಿಯ ಮೇಲೆ ದುಡ್ಡು ಪಡೆದಿದ್ದೆವು ಅದಕ್ಕೆ 8% ರಷ್ಟು ಬಡ್ಡಿಯನ್ನು ಸಹ ಕೊಟ್ಟಿದ್ದೇವು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ರೂ.8,50,000/- ಕ್ಕೆ 05 ವರ್ಷದ

ಬಡ್ಡಿ ಸೇರಿಸಿ ರೂ.16,00,000/- ಎಂದು ಖೊಟ್ಟಿ ಕರಾರ ಪತ್ರ ಸೃಷ್ಟಿ ಮಾಡಿಕೊಂಡಿದ್ದಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

27. ಉದ್ದಪ್ಪ ಲಾಳಿ, ಅಜ್ಜಪ್ಪ ವಡೇರ, ತೀರ್ಥಪ್ಪ ಪೂಜೇರಿ, ಕಲ್ಲಪ್ಪ ವಡೇರ ನನ್ನ ಗೆಳೆಯರು ಎಂದರೆ ಸಾಕ್ಷಿದಾರರು ಸದರಿಯವರೆಲ್ಲ ತಮ್ಮ ಸಂಬಂಧಿಕರು ಎಂದು ಹೇಳುತ್ತಾರೆ. ವಾದಿ ಖರೀದಿ ಕರಾರು ಪತ್ರದ ಅಧಾರದ ಮೇಲೆ ಮೇಲಿಂದ ಮೇಲೆ ನಮಗೆ ಖರೀದಿ ಪತ್ರ ಬರೆದುಕೊಡಲು ಕೇಳಿದ್ದರೂ ಸಹ ನಾವು ಅದನ್ನು ಮುಂದೂಡುತ್ತಾರೆ ಬಂದಿದ್ದೇವೆ ಎಂದರೆ ಸರಿಯಲ್ಲ. ವಾದಿಗೆ ಖರೀದಿ ಪತ್ರ ಬರೆದುಕೊಡುವುದನ್ನು ತಪ್ಪಸುವುದಕ್ಕಾಗಿ ದಿನಾಂಕ 12/12/2021 ರಂದು ಒಟ್ಟು ರೂ.9,86,000/- ಈ ಮೇಲೆ ಹೇಳಿದ ನಾಲ್ಕು ಜನರ ಸಮಕ್ಷಮ ಕೊಟ್ಟಿರುತ್ತೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

28. ನಾನು ಹೇಳುವ ಪ್ರಕಾರ ದಿಃ 13/12/2021 ರಂದು ನಾನು, ಉದ್ದಪ್ಪ ಲಾಳಿ, ಅಜ್ಜಪ್ಪ ವಡೇರ, ತೀರ್ಥಪ್ಪ ಪೂಜೇರಿ, ಕಲ್ಲಪ್ಪ ವಡೇರ ಸೇರಿಕೊಂಡು ಗೋಕಾಕಗೆ ಬಂದಿದ್ದೆವು. ವಾದಿಗೆ ನಾವು ಬರೆದುಕೊಟ್ಟ ಖರೀದಿ ಕರಾರ ಪತ್ರದ ಪ್ರಕಾರ ಖರೀದಿ ಪತ್ರ ಬರೆದುಕೊಡುವುದನ್ನು ತಪ್ಪಿಸಿಕೊಳ್ಳುವ ಉದ್ದೇಶದಿಂದ ನಿಡಿ-11ನ್ನು 1ನೇ ಪ್ರತಿವಾದಿಯ ಹೆಸರಿಗೆ ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಿಡಿ-10ರಲ್ಲಿ ಪ್ರತಿವಾದಿ, 1, 2, ನನ್ನ, 4 ಮತ್ತು 8 ರವರ ಹೆಸರುಗಳು ಇವೆ ಎಂದರೆ ಸರಿ. 2ನೇ ಪುಟದಲ್ಲಿ

ಬರೆಯಿಸಿಕೆಂಡವರ ಸಹಿಯಲ್ಲಿ ನನ್ನ ಸಹಿಯನ್ನು ಹೊರತುಪಡಿಸಿ ಪ್ರತಿವಾದಿ 1, 2, 4, 8 ಹಾಗೂ ವಾದಿಯ ಸಹಿಗಳು ಇರುವುದಿಲ್ಲ ಎಂದರೆ ಸರಿ.

29. ವಾದಿಗೆ ಖರೀದಿ ಪತ್ರ ಬರೆದುಕೊಡುವುದನ್ನು ತಪ್ಪಿಸುವ ಉದ್ದೇಶದಿಂದ ನಾನು ಹಾಗೂ ನನ್ನ ಸಂಬಂಧಿಕರು ನಿಡಿ-10ನ್ನು ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಿಡಿ-10ನ್ನು ಸೃಷ್ಟಿ ಮಾಡುವ ಉದ್ದೇಶದಿಂದ ನಿಡಿ-11ರ ಪ್ರಕಾರ 1ನೇ ಪ್ರತಿವಾದಿಯ ಹೆಸರಿನಲ್ಲಿ ಚಲನ್ ತುಂಬಿದ್ದೇವು ಎಂದರೆ ಸರಿಯಲ್ಲ.

30. ಖರೀದಿ ಪತ್ರ ಬರೆದುಕೊಡದೇ ಇದ್ದುದ್ದರಿಂದ ವಾದಿ ತಮ್ಮ ವಕೀಲರ ಮುಖಾಂತರ ಒಂದು ನೋಟಿಸು ಕೊಟ್ಟಿದ್ದಾರೆ ಎಂದರೆ ಖೊಟ್ಟಿ ನೋಟಿಸು ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ವಾದಿ ತಮ್ಮ ವಕೀಲರ ಮುಖಾಂತರ ಕೊಟ್ಟ ನೊಟೀಸಗೆ ನಾವು ಸುಳ್ಳು ಉತ್ತರ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಿಡಿ-10 ಮತ್ತು 11 ರ ಬಗ್ಗೆ ನಾವು ವಾದಿ ಅವರ ವಕೀಲರಿಂದ ಕೊಟ್ಟ ನೋಟಿಸಿಗೆ ಉತ್ತರದಲ್ಲಿ ಹೇಳಿದ್ದರಿಂದ ಸದರಿ ದಾಖಲೆಗಳ ಬಗ್ಗೆ ವಾದಿಗೆ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ.

31. ಖರೀದಿ ಕರಾರ ಪತ್ರದ ಆಧಾರದ ಮೇಲೆ ವಾದಿಗೆ ನಾವು ಖರೀದಿ ಪತ್ರ ಬರೆದುಕೊಡದೇ ಇದ್ದುದ್ದರಿಂದ ವಾದಿ ಈ ದಾವೆ ಮಾಡಿದ್ದಾರೆ ಎಂದರೆ ಸಾಕ್ಷಿದಾರರು ತಾವು ವಾದಿಗೆ ಖರೀದಿ ಕೊಟ್ಟಿಲ್ಲ ಎಂದು ಹೇಳುತ್ತಾರೆ.

32. ಚೋಟಪ್ಪಗೋಳ ವಕೀಲರು ಮತ್ತು ವಿ.ಆರ್.ಮುನ್ನೋಳಿ ವಕೀಲರದು ಒಂದೇ ಕಚೇರಿ ಇದೆ ಎಂದರೆ ಸರಿ. ಸಿದ್ದವ್ವ ಮತ್ತು ಮಹಾದೇವಿ ನನ್ನ ಅಕ್ಕಂದಿಯರು ಇರುತ್ತಾರೆ. ನನ್ನದು ಹಾಗೂ ನನ್ನ ಅಕ್ಕಂದಿಯರ ಸಂಬಂಧ ಸರಿಯಾಗಿ ಇದೆ ಎಂದರೆ ಸರಿ ಇಲ್ಲ. ವಾದಿಗೆ ಖರೀದಿ ಪತ್ರ ಬರೆದುಕೊಡುವುದನ್ನು ತಪ್ಪಿಸಿಕೊಳ್ಳುವ ಉದ್ದೇಶದಿಂದ ನಮ್ಮ ವಕೀಲರಿಂದ ಓ.ಎಸ್.ನಂ.190/2023 ಹಾಗೂ 197/2023 ರಲ್ಲಿ ಸುಳ್ಳು ದಾವೆಗಳನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ವಾದಿಗೆ ಖರೀದಿ ಪತ್ರ ಬರೆದುಕೊಡಬಾರದು ಹಾಗೂ ವಾದಿಯ ದುಡ್ಡು ಮುಳುಗಿಸಬೇಕೆನ್ನುವ ಉದ್ದೇಶ ಇರುತ್ತದೆ ಎಂದರೆ ಸಾಕ್ಷಿದಾರರು ತಾವು ವಾದಿಯ ದುಡ್ಡು ವಾಪಸ್ ಕೊಟ್ಟಿದ್ದಾಗಿ ಹೇಳುತ್ತಾರೆ. ವಾದಿ ದಾವಾ ಆಸ್ತಿಯ ವ್ಯವಹಾರದ ಕುರಿತು ನಮಗೆ ದುಡ್ಡು ಕೊಟ್ಟಿದ್ದು ವಾದಿ ನಮ್ಮಿಂದ ಯಾವತ್ತೂ ದುಡ್ಡು ವಾಪಸು ಪಡೆದಿಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀಸವಾಲಿಗೆ ಸಮಯ ಕೋರುತ್ತಾರೆ. ಸಮಯ ಕೊಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ